ಸಂಭ್ರಮದ ಬೆಳ್ಳುಗಿಲಿನಲ್ಲಿ ತೇಲುತ್ತಿದ್ದ, ಮದುವೆ ನಿಕ್ಕಿಯಾದ ಜೋಡಿಯನ್ನು ಬೇರೆಬೇರೆ ಭಂಗಿಯಲ್ಲಿ ನಿಲ್ಲಿಸಿ ಫೋಟೊ ತೆಗೆಯುತ್ತಿದ್ದ ಗಣೇಶ. ಅವರಿಬ್ಬರೂ ಹೆಗಲ ಮೇಲೆ ಕೈ ಹಾಕಿಕೊಂಡು, ಒಬ್ಬರನ್ನೊಬ್ಬರು ತಬ್ಬಿಕೊಂಡು, ಎತ್ತಿಕೊಂಡು ಕ್ಯಾಮೆರಾದಲ್ಲಿ ಸೆರೆಯಾಗುತ್ತಿದ್ದರು. ಅವನ ಕಣ್ಣಲ್ಲಿ ಅವಳು ದೂಳು ತೆಗೆಯುತ್ತಿರುವಂತೆ, ಅವಳ ತಲೆಯನ್ನು ಅವನು ಬಾಚುತ್ತಿರುವಂತೆ, ಹೂ ಮುಡಿಸುತ್ತಿರುವಂತೆ... ಇನ್ನೂ ಎಂತೆಂಥದೋ ಆತ್ಮೀಯ ಸಂದರ್ಭಗಳನ್ನು ಕೃತಕವಾಗಿ ಸೃಷ್ಟಿಸುತ್ತಿದ್ದರು. ಆ ಜಾಗದಲ್ಲಿ ನನ್ನನ್ನೂ ವೈಶಾಲಿಯನ್ನೂ ಕಲ್ಪಿಸಿಕೊಂಡೆ. ಇಷ್ಟು ಜನರ ಎದುರಿಗೆ ನಾನು ಅವಳನ್ನು ಹೀಗೆ ತಬ್ಬಬಲ್ಲೆನೇ? ಮುದ್ದಾಡಬಲ್ಲೆನೇ? ಬಲವಂತವಾಗಿ ಹಾಗೆಲ್ಲ ನಟಿಸಿದರೂ ಕ್ಯಾಮರಾದಲ್ಲಿ ಮೂಡುವ ಆ ಚಿತ್ರ ಅದೆಷ್ಟು ಕೃತಕವಾಗಿ, ಹಾಸ್ಯಾಸ್ಪದವಾಗಿರಬಹುದು?

ಭಾವನೆಗಳು ಎಲ್ಲರಲ್ಲೂ ಇವೆ. ಆದರೆ, ಅವನ್ನು ವ್ಯಕ್ತಪಡಿಸುವ ರೀತಿ ಬೇರೆಬೇರೆ. ನನ್ನೊಳಗೂ ಪ್ರೀತಿಯಿದೆ. ಅಪ್ಪುಗೆಯಿದೆ, ಸ್ಪರ್ಶವಿದೆ. ಕಾಳಜಿಯಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜನುಮದ ಕೊನೆಯ ಕ್ಷಣದ ತನಕ ಖಾಲಿಯಾಗದ ಒಲುಮೆಯಿದೆ...

''ಜಗತ್ತು ನಿನ್ನ ಯೋಗ್ಯತೆಯನ್ನು ನಿರ್ಧರಿಸುವುದು ನೀನು ಮಾಡುವ ಕೆಲಸಗಳಿಂದಲೇ ಹೊರತು ನಿನ್ನ ಯೋಚನೆಗಳನ್ನು ನೋಡಿ ಅಲ್ಲ.''

ಗಣೇಶನ ಮಾತುಗಳು ಕಿವಿಯೊಳಗೆ ಮಾರ್ದನಿಸಿದವು.

★★★

''ಬ್ರೋಕರ್ ನಾಳೆ ಹೆಬ್ಬಾಳಕ್ಕೆ ಹೋಗೋದಿದೆಯಂತೆ. ಅಲ್ಲೇ ಹುಡುಗಿಯ ಮನೆಗೆ ಹೋಗಿ ಅವಳ ಅಂತಿಮ ನಿರ್ಧಾರವೇನು ಅಂತ ಕೇಳಿ ಫೋನ್ ಮಾಡ್ತಾನಂತೆ.''

ಹಾಗೆಂದ ಅಮ್ಮನ ಕರೆಯನ್ನು ಕಟ್ ಮಾಡಿ ರೂಮಿನಿಂದ ಹೊರಗೆ ಟೆರಸಿಗೆ ಬಂದೆ. ಚಂದ್ರ ಬೀರುತ್ತಿದ್ದ ಬೆಳದಿಂಗಳು ಬೀದಿದೀಪಗಳೊಂದಿಗೆ ಬೆರೆತು ಹಳದಿ ಬೆಳಕಾಗುತ್ತಿತ್ತು. ಟೆರಸಿನ ಕಟ್ಟೆಗೆ ಆತು ನಿಂತೆ. ಕೆಳಗಡೆ ರಸ್ತೆಯಲ್ಲಿ ಜೋಡಿಯೊಂದು ಹೆಗಲಿಗೆ ಹೆಗಲು ಅಂಟಿಸಿಕೊಂಡು ಆಹ್ಲಾದದಲ್ಲಿ ಹರಟುತ್ತಾ ನಡೆಯುತ್ತಿತ್ತು.

ಹೇಗೆ ಮೂಡುತ್ತದೆ ನಾಳೆಯ ಬೆಳಗು? ಅವಳ ಒಪ್ಪಿಗೆಯೊಂದಿಗೆ? ಅಥವಾ ಮತ್ತೊಂದು ತಿರಸ್ಕಾರದೊಂದಿಗೆ? ಮೊನ್ನೆಯ ಭೇಟಿಯಲ್ಲಿ ನಾನು ನಡೆದುಕೊಂಡ ರೀತಿ ಗಮನಿಸಿದರೆ ಬಹುಶಃ ತಿರಸ್ಕಾರವೇ ಪಕ್ಕಾ ಅನಿಸುತ್ತಿದೆ. ಎಷ್ಟೊಂದು ಎಡವಟ್ಟಾಗಿ ನಡೆದುಕೊಂಡುಬಿಟ್ಟೆ. ಛೇ... ಬೇಸರ ತಡೆಯಲಾಗಲಿಲ್ಲ. ಟೆರಸಿನ ಆಚೆ ಮೂಲೆಯಲ್ಲಿ ಗಣೇಶ ವಿಸ್ಕಿ ಬಾಟಲಿಯನ್ನೂ, ಒಂದಷ್ಟು ತಿಂಡಿಗಳನ್ನೂ ಇಟ್ಟುಕೊಂಡು ಕುಡಿಯುತ್ತಾ ಕುಳಿತಿದ್ದ. ಅತ್ತ ನಡೆದು ಅವನೆದುರು ಕುಳಿತವನೇ ಖಾಲಿ ಇದ್ದ ಗ್ಲಾಸೊಂದನ್ನು ಅವನತ್ತ ತಳ್ಳಿ ನನಗೂ ಸ್ವಲ್ಪ ಹಾಕು ಎಂದೆ.

''ಏನೋ? ನೀನೂ ಕುಡೀತೀಯಾ?''

ಗಣೇಶ ಅಚ್ಚರಿಯಿಂದ ಕೇಳಿದ. ಈಗಷ್ಟೇ ಅಮ್ಮ ಹೇಳಿದ್ದನ್ನೂ, ಮನಸ್ಸಿನೊಳಗೆ ಕುದಿಯುತ್ತಿರುವ ತಳಮಳಗಳನ್ನೂ ಅವನಿಗೆ ಹೇಳಿದೆ.

''ಹೌದು ಕಣೋ, ಕುಡೀತೀನಿ! ಕಹಿಯಾದ ವಾಸ್ತವಗಳು ತುಂಬಿರೋ ಈ ಜಗತ್ತಿಗಿಂತ ನಶೆಯ ಕಲ್ಪನಾ ಜಗತ್ತೇ ನನ್ನ ಪಾಲಿಗೆ ಸುಂದರವಾಗಿದೆ. ಇಲ್ಲಿ ಯಾರಿಗೂ ನಾನು ಬೇಡ. ಇವರ್‍ಯಾರಿಗೂ ಪ್ರಾಣದಂತೆ ಪ್ರೀತಿಸುವ, ಭಾವುಕತೆಯಿಂದ ಹಚ್ಚಿಕೊಳ್ಳುವ, ಸದಾ ಅವರ ಕುರಿತೇ ಯೋಚಿಸುವ ಭಾವುಕ ಪ್ರೇಮಿ ಬೇಡ. ಇವರಿಗೆ ಬೇಕಿರುವುದು ಲಕಲಕನೆ ಹೊಳೆಯುವ ಬಾಹ್ಯ ಸೌಂದರ್ಯವಿರುವ, ಪಟಪಟನೆ ಮಾತನಾಡುವ, ಸಾಮಿಪ್ಯದ ಅಡ್ವಾಂಟೇಜ್ ತೆಗೆದುಕೊಳ್ಳುವ, ಆ ಕ್ಷಣಕ್ಕೆ ಬೇಕಾದುದನ್ನು ಕೊಟ್ಟು ಎದ್ದುಹೋಗುವ ಸಮಯಸಾಧಕರು! ನನಗೆ ಅದೆಲ್ಲಾ ಬರೋದಿಲ್ಲ